# ಫೀನಿಕ್ಸ್

ಕ್ಷಣ ಸಾಕಿತ್ತು,
ಹಿಂದೆಲ್ಲ ನೀ ಈಜಲು ಕರೆದಾಗ
ಕಾಲ್ತೊಡಕಿಸಿ ಒಳಗಿಂದೊಳಗೇ ನಿನ್ನನ್ನೆಳೆದುಕೊಳ್ಳಲು;
ಬಳುಕಬೇಕೆನ್ನಿಸಲೇ ಇಲ್ಲ.




ಆಗಾಗ ಇಲ್ಲಿ ಏಳುತ್ತಿದ್ದ ಸಿಟುಕು ಗಾಳಿಗೆ ಹಳದಿ ಬಿಸಿಲಿಗೆ
ಅಪರತಪರ ಮಳೆಗೆ ಅಷ್ಟಷ್ಟೇ ಮೈ ಒಲಿಯಿತು
ಎದ್ದ ಸುಂಟರಗಾಳಿಯೂ ಉಬ್ಬಿದೆದೆಗೆ ಬೆಚ್ಚಿತು;
ಬೊಡ್ಡೆಯಾಗುವ ಕಷ್ಟದಲ್ಲೂ ಎಂಥ ಅರಿವಿದೆ.

ಸ್ವಾರ್ಥದ ಕೊಡಲಿಗೆ ಒಂದೇ ಕಾವು
ಘನದಿಂಡಿನ ತುಂಡುಗಳಿಗೆ ಸಾವಿರ ಕಾಲು
ಕಾಯುತ್ತಿತ್ತೇ ನಿನ್ನೊಳಗಿನ ಶಾಂತ ಸರೋವರ?
ತೇಲು ಸುಮ್ಮನೇ ದಕ್ಕುವುದಿಲ್ಲ.

ದಡದ ಬಿಗುಮಾನ ಅಲೆಗಳಿಗಷ್ಟೇ ಅರ್ಥವಾಗುತ್ತದೆ
ಅಪ್ಪಳಿಸಿದಾಗೆಲ್ಲ ಅಷ್ಟಷ್ಟೇ ಕರಗುವ ಅದಕ್ಕೆ
ನಟ್ಟನಡುವೆ ಏಳುವ ಸುಳಿ ನಿಲ್ಲಿಸಲಾಗದು;
ಅಪಾಯವೊಂದು ಅನುಭೂತಿ.

‘ಬಿಡು ಕೈ ಇಬ್ಬರೂ ಮುಳುಗುತ್ತೇವೆ!’
ಈಗ ಕೊಸರಿಕೊಂಡು ಹೊರಟಿದ್ದೀಯಾ
ನಿನ್ನ ಬೆನ್ನಿಗಂಟಿಕೊಂಡಿದ್ದನ್ನೊಮ್ಮೆ ನೋಡಬಾರದೆ?
ತರಗೆಲೆಯಾಗುವುದರಲ್ಲೂ ಅದೆಷ್ಟು ಸುಖವಿದೆ.

ನಾಳೆಯೊಂದು ದಿನ ಬಿಸಿಲು ಕಾಯಿಸುವಾಗ
ಬೂದುಮೋಡದಂಥ ಪದರವೊಂದು
ಭುಜ ತಡವಿ ಕಣ್ಣು ಮಂಜಾಗಿಸಬಹುದು;
ಸುಟ್ಟರೂ ಹಾರುವ ಹುಕಿ.

● **ಶ್ರೀದೇವಿ ಕಳಸದ**